ಸಂಖ್ಯೆ. ಎ.ಡಿ.ಎಂ.I(ಎ) /20/ 2019

ನಗರ ಸಿವಿಲ್ ನ್ಯಾಯಾಲಯದ ಕಾರ್ಯಾಲಯ,
ಬೆಂಗಳೂರು

ದಿನಾಂಕ : 10-01-2019

## ನೇಮಕಾತಿ ಪ್ರಕಟಣೆ

ಬೆಂಗಳೂರು, ನಗರ ಸಿವಿಲ್ ನ್ಯಾಯಾಲಯ ಘಟಕದಲ್ಲಿ ಖಾಲಿ ಇರುವ ಶೀಘ್ರಲಿಪಿಗಾರರು ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ. ಈ ಕೆಳಕಂಡ ಷರತ್ತುಗಳನ್ನು ಪೂರೈಸಿದ ಅರ್ಹ ಅಭ್ಯರ್ಥಿಗಳು ನ್ಯಾಯಾಲಯದ ವೆಬ್‌ಸೈಟ್ **https://districts.ecourts.gov.in/bangalore** or **www.karnatkajudiciary.kar.nic.in/districtrecruitment.asp** ನಲ್ಲಿ ದಿನಾಂಕ: **31-03-2019** ರ ರಾತ್ರಿ **11.59** ಗಂಟೆಯೊಳಗೆ ಅರ್ಜಿಗಳನ್ನು ಸಲ್ಲಿಸಲು ಸೂಚಿಸಿದೆ.

### ಖಾಲಿ ಹುದ್ದೆಯ ವಿವರಗಳು:

| ಕ್ರಮ ಸಂಖ್ಯೆ | ಅಧಿಸೂಚನೆ ಸಂಖ್ಯೆ | ಹುದ್ದೆಯ ಹೆಸರು | ಖಾಲಿ ಹುದ್ದೆಗಳ ಸಂಖ್ಯೆ | ವೇತನ ಶ್ರೇಣಿ |
|---|---|---|---|---|
| 1 | ಎಡಿಎಂ-1(ಎ)/20/2019 | ಶೀಘ್ರಲಿಪಿಗಾರರು | 39 (8 ಹಿಂಬಾಕಿ) | 27650-650-29600-750-32600-850-36000-950-39800-1100-46400-1250-52650 + ವಿಶೇಷ ಭತ್ಯೆ ರೂ.165/- |

### :ಖಾಲಿ ಹುದ್ದೆಗಳ ವರ್ಗೀಕರಣ :

ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ 8 ಸಹಿಮ 95 ದಿನಾಂಕ: 20-6-95 ಮತ್ತು ಸರ್ಕಾರಿ ಆದೇಶ ಸಂಖ್ಯೆ ಸಿ.ಆಸು.ಇ 97 ಸೆ.ನ.ನಿ 2002 ದಿನಾಂಕ 22-11-2002 ಹಾಗೂ ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 53 ಸೆನೆನಿ ದಿನಾಂಕ:4.1.2008 ರ ಪ್ರಕಾರ ಕಾದಿರಿಸಿದ ಹುದ್ದೆಗಳ ವರ್ಗೀಕರಣ:

downloaded from: www.kpscvaani.com

**:ಶೀಘ್ರಲಿಪಿಗಾರ ಹುದ್ದೆಗಳು: (ಒಟ್ಟು ಮೂಲ ವೃಂದ-35 ಹುದ್ದೆಗಳು, 6 ಹಿಂಬಾಕಿ ಹುದ್ದೆಗಳು):**

| ಕ್ರಮ ಸಂಖ್ಯೆ | | ಸಾಮಾನ್ಯ ಅರ್ಹತೆ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಪ್ರವರ್ಗ – I | ಪ್ರವರ್ಗ-II (ಎ) | ಪ್ರವರ್ಗ– II (ಬಿ) | ಪ್ರವರ್ಗ– III (ಎ) | ಪ್ರವರ್ಗ– III(ಬಿ) | ಒಟ್ಟು |
|---|---|---|---|---|---|---|---|---|---|---|
| 1 | ಮಹಿಳಾ ಅಭ್ಯರ್ಥಿ | 06 | 01 | 1** | 01 | 01 | - | - | 01 | **11** |
| 2 | ಮಾಜಿ ಸೈನಿಕರು | 01 | 01+ 1** | - | - | 01 | - | - | - | **04** |
| 3 | ಗ್ರಾಮೀಣ ಅಭ್ಯರ್ಥಿ | 04 | 01 + 2** | 1** | - | 01 | - | 01 | 01 | **11** |
| 4 | ಇತರೇ ಅಭ್ಯರ್ಥಿ | 01 | 01 | - | - | 01 | 01 | 01 | - | **5** |
| 5 | ಕನ್ನಡ ಮಾಧ್ಯಮ ಅಭ್ಯರ್ಥಿ | 01 | - | - | - | - | - | - | - | **01** |
| 6 | ಯೋಜನಾ ನಿರಾಶ್ರಿತ ಅಭ್ಯರ್ಥಿ | 01 | - | - | - | - | - | - | - | **01** |
| 7 | ಅಂಗವಿಕಲ ಅಭ್ಯರ್ಥಿ | * 01 | 1** | - | - | - | - | - | - | **02** |
| | ಒಟ್ಟು | **15** | **08** | **02** | **01** | **04** | **01** | **02** | **02** | **35** |

* ಶ್ರವಣದೋಷವುಳ್ಳ ಅಭ್ಯರ್ಥಿಗೆ ಮೀಸಲಿರಿಸಲಾಗಿದೆ.

** ಹಿಂಬಾಕಿ ಹುದ್ದೆಗಳು

**:ಶೀಘ್ರಲಿಪಿಗಾರ ಹುದ್ದೆಗಳು: (ಒಟ್ಟು ಸ್ಥಳೀಯ ವೃಂದ 4 ಹುದ್ದೆಗಳು, 2 ಹಿಂಬಾಕಿ ಹುದ್ದೆಗಳು)**

**(ಹೈದರಾಬಾದ್–ಕರ್ನಾಟಕ)**

| | ಸಾಮಾನ್ಯ ಅರ್ಹತೆ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಪ್ರವರ್ಗ IIಎ | ಒಟ್ಟು |
|---|---|---|---|---|---|
| 1. ಗ್ರಾಮೀಣ ಅಭ್ಯರ್ಥಿ | 1 | - | - | - | **01** |
| 2. ಇತರೆ ಅಭ್ಯರ್ಥಿಗಳು | - | 1** | 1** | 1 | **03** |
| ಒಟ್ಟು | **01** | **01** | **01** | **01** | **04** |

** ಹಿಂಬಾಕಿ ಹುದ್ದೆಗಳು

downloaded from: www.kpscvaani.com

## ಶೀಘ್ರಲಿಪಿಗಾರರು

| | | |
|---|---|---|
| 1. | ನೇಮಕಾತಿ ವಿಧಾನ | ಕರ್ನಾಟಕ ಅಧೀನ ನ್ಯಾಯಾಲಯಗಳು (ಲಿಪಿಕ ಮತ್ತು ಇತರ ಹುದ್ದೆಗಳು) (ನೇಮಕಾತಿ) ನಿಯಮಗಳು 1982, ನಿಯಮ 4 ರ ಪ್ರಕಾರ, ಸರ್ಕಾರದ ಅಧಿಸೂಚನೆ ಸಂಖ್ಯೆ: ಲಾ 01 ಎಲ್ಎಸಿ 2005 ದಿನಾಂಕ: 13.2.2008 ರಲ್ಲಿ ತಿದ್ದುಪಡಿಯಾದಂತೆ: |
| 2. | ಅರ್ಜಿಗಳನ್ನು ಸಲ್ಲಿಸಬೇಕಾದ ಜಾಲತಾಣ | **https://districts.ecourts.gov.in/bangalore**<br>**or**<br>**www.karnatkajudiciary.kar.nic.in/districtrecruitment.asp** |
| 3. | ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ನಿಗದಿ ಪಡಿಸಿರುವ ದಿನಾಂಕ | **ಪ್ರಾರಂಭ ದಿನಾಂಕ: :01-03-2019**<br>**ಕೊನೆಯ ದಿನಾಂಕ:31-03-2019 ರ ರಾತ್ರಿ 11.59 ಗಂಟೆಯೊಳಗೆ** |
| 4. | ವಿದ್ಯಾರ್ಹತೆ: ಶೀಘ್ರಲಿಪಿಗಾರರ ಹುದ್ದೆಗೆ | ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ನಡೆಸುವ ಆಂಗ್ಲ ಹಾಗೂ ಕನ್ನಡ ಭಾಷೆಗಳ ಹಿರಿಯ ಶ್ರೇಣಿಯ ಶೀಘ್ರಲಿಪಿ ಮತ್ತು ಆಂಗ್ಲ ಹಾಗೂ ಕನ್ನಡ ಭಾಷೆಗಳ ಹಿರಿಯ ಶ್ರೇಣಿಯ ಬೆರಳಚ್ಚು ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರಬೇಕು ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು.<br>ಗಣಕ ಯಂತ್ರದ ಸಾಮಾನ್ಯ / ಮೂಲಜ್ಞಾನ ಇರುವವರಿಗೆ ಆದ್ಯತೆ ನೀಡಲಾಗುವುದು. |
| 5. | ವಯೋಮಿತಿ | ಅಭ್ಯರ್ಥಿಯು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು 18 ವರ್ಷ ಪೂರೈಸಿರಬೇಕು ಮತ್ತು ಕೆ.ಸಿ.ಎಸ್(ಸಾಮಾನ್ಯ ನೇಮಕಾತಿ) ನಿಯಮಗಳು, 1977 ನಿಯಮ 6 ರಲ್ಲಿ ನಿಗದಿಪಡಿಸಿರುವ ಗರಿಷ್ಠ ವಯಸ್ಸು ಕೆಳಕಂಡಂತಿರಬೇಕು.<br>1 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ- I ರ ಅಭ್ಯರ್ಥಿಗಳಿಗೆ 40 ವರ್ಷ ಮೀರಿರಬಾರದು.<br>2 ಪ್ರವರ್ಗ- II-(ಎ), II-(ಬಿ), III-(ಎ), III-(ಬಿ) ಅಭ್ಯರ್ಥಿಗಳು 38 ವರ್ಷ ಮೀರಿರಬಾರದು<br>3 ಸಾಮಾನ್ಯ ಅಭ್ಯರ್ಥಿಗಳು 35 ವರ್ಷ ಮೀರಿರಬಾರದು.<br>4 ವಯಸ್ಸಿನ ಮಿತಿಯನ್ನು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ರಾಜ್ಯ / ಕೇಂದ್ರ ಸರ್ಕಾರಿ ನೌಕರರು / ಮಾಜಿಸೈನಿಕರು / ಅಂಗವಿಕಲ ಅಭ್ಯರ್ಥಿಗಳು / ಹಾಗೂ ವಿಧವೆಯರ ಬಗ್ಗೆ ಕೆ.ಸಿ.ಎಸ್. (ಸಾಮಾನ್ಯ ನೇಮಕಾತಿ ) ನಿಯಮಗಳು 1977ರ ಪ್ರಕಾರ ಸಡಿಲಿಕೆಯನ್ನು ಕೊಡಲಾಗುವುದು. |

ಸೂಚನೆ :

1. ಅಭ್ಯರ್ಥಿಗಳು ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು, ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ.

downloaded from: www.kpscvaani.com

2. <u>ಅಭ್ಯರ್ಥಿಗಳು ನಿಗದಿತ ಶುಲ್ಕವನ್ನು ಕೆಳಕಂಡ ಎರಡು ವಿಧಾನದ ಪೈಕಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಂಡು ಪಾವತಿ ಮಾಡತಕ್ಕದ್ದು.</u>

ಅ) ನ್ಯಾಯಾಲಯದ ವೆಬ್‌ಸೈಟ್ **https://districts.ecourts.gov.in/bangalore** or **www.karnatkajudiciary.kar.nic.in/districtrecruitment.asp** ರಲ್ಲಿ ನೀಡಲಾಗಿರುವ ಲಿಂಕ್ ಮುಖಾಂತರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ **State Bank Collect** ಮೂಲಕ **online Payment through Net Banking / Credit Card / debit Card / Challan Download** ಸೌಲಭ್ಯದ ಮೂಲಕ **Registrar, City Civil Court, Bengaluru** ರವರ ಹೆಸರಿಗೆ ಪಾವತಿಸತಕ್ಕದ್ದು.

ಅಭ್ಯರ್ಥಿಗಳು ಕಡ್ಡಾಯವಾಗಿ **Registrar, City Civil Court, Bengaluru** ಇವರ ಹೆಸರಿನಲ್ಲೇ ಶುಲ್ಕ ಪಾವತಿ ಮಾಡತಕ್ಕದ್ದು. ಬೇರೆ ಯಾವುದೇ ಕಛೇರಿ ಅಥವಾ ಸಂಸ್ಥೆಯ ಹೆಸರಿನಲ್ಲಿ ಪಾವತಿಸಲಾದ ಅರ್ಜಿಗಳನ್ನು ತಿರಸ್ಕೃತಗೊಳಿಸಲಾಗುತ್ತದೆ.

<u>ಅಥವಾ</u>

ಆ) ಆನ್‌ಲೈನ್ ಮೂಲಕ ಮೇಲ್ಕಂಡ ವಿಧಾನದಲ್ಲಿ ಶುಲ್ಕವನ್ನು ಪಾವತಿ ಮಾಡಲಾಗದೇ ಇದ್ದಲ್ಲಿ ಅಭ್ಯರ್ಥಿಗಳು ಚಲನ್ ಪ್ರತಿಯನ್ನು ಅಧಿಕೃತ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ಅದರ ಪ್ರಿಂಟ್‌ಔಟನ್ನು ಪಡೆದುಕೊಂಡು ಕರ್ನಾಟಕ ರಾಜ್ಯದ ಎಸ್.ಬಿ.ಐ ನ ಯಾವುದೇ ಶಾಖೆಗೆ ಹಾಜರುಪಡಿಸಿ ಶುಲ್ಕವನ್ನು ಪಾವತಿಸತಕ್ಕದ್ದು. ಡಿಮ್ಯಾಂಡ್ ಡ್ರಾಫ್ಟ್ ಪೋಸ್ಟಲ್ ಆರ್ಡರ್, ನಗದು , ಮನಿ ಆರ್ಡರ್ ಇವುಗಳನ್ನು ಸ್ವೀಕರಿಸುವುದಿಲ್ಲ

3. <u>ಅಭ್ಯರ್ಥಿಗಳು ನಿಗದಿತ ಶುಲ್ಕವನ್ನು ಈ ಕೆಳಗೆ ತಿಳಿಸಿರುವಂತೆ ಪಾವತಿಸತಕ್ಕದ್ದು.</u>

- ಸಾಮಾನ್ಯ ವರ್ಗ, ಪ್ರವರ್ಗ-II-(ಎ), II-(ಬಿ), III-(ಎ), III-(ಬಿ) ಅಭ್ಯರ್ಥಿಗಳು- ರೂ.200/-.
- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಪ್ರವರ್ಗ- I ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ ರೂ.50/-.
- ಆಯಾ ಪ್ರವರ್ಗಗಳಿಗೆ ನಿಗದಿ ಪಡಿಸಿರುವ ಶುಲ್ಕವನ್ನು ಪಾವತಿಸದ ಅರ್ಜಿಗಳನ್ನು ಯಾವುದೇ ಸೂಚನೆಯಿಲ್ಲದೆ ತಿರಸ್ಕರಿಸಲಾಗುವುದು.

4. ಖಾಲಿ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಅನಿವಾರ್ಯ ಸಂದರ್ಭಗಳಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ.

5. ನೇಮಕಾತಿಯು ತಾತ್ಕಾಲಿಕವಾಗಿದ್ದು ಎರಡು ವರ್ಷದ ಪರೀಕ್ಷಾರ್ಥ ಅವಧಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ.

downloaded from: www.kpscvaani.com

6. ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸುವ ಸಮಯದಲ್ಲಿಯೇ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದಿರುವ ನಿರಾಪೇಕ್ಷಣಾ ಪ್ರಮಾಣಪತ್ರದ ವಿವರಗಳನ್ನು ನಮೂದಿಸತಕ್ಕದ್ದು.

7. ಅಂಗವಿಕಲ ಮೀಸಲಾತಿಯಡಿ ನಿಗದಿಪಡಿಸಲಾದ ಅಂಗವೈಕಲ್ಯವುಳ್ಳ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಇತರೆ ಅಂಗವೈಕಲ್ಯವುಳ್ಳ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದು.

8. ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರ ಪ್ರಕಾರ ಅಥವಾ ಇನ್ನಾವುದೇ ನಿಯಮಗಳ ಪ್ರಕಾರ ಅಭ್ಯರ್ಥಿಗಳು ಅನರ್ಹನಾಗಿದ್ದಲ್ಲಿ ನೇಮಕಾತಿಗೆ ಅರ್ಹರಾಗುವುದಿಲ್ಲ.

9. ಮೂಲ ಪ್ರಮಾಣ ಪತ್ರಗಳನ್ನು ಅರ್ಹತಾ ಪರೀಕ್ಷೆ / ಸಂದರ್ಶನ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

10. ಅಪೂರ್ಣ ಅರ್ಜಿಗಳನ್ನು ಯಾವ ಪತ್ರವ್ಯವಹಾರಕ್ಕೂ ಅವಕಾಶ ನೀಡದೆ ತಿರಸ್ಕರಿಸಲಾಗುವುದು.

11. ಅಭ್ಯರ್ಥಿಯು ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸುವುದು ಹಾಗೂ ಇ-ಮೇಲ್ ಐಡಿಯನ್ನು ಹೊಂದಿದ್ದಲ್ಲಿ ನಮೂದಿಸುವುದು.

12. ಅಭ್ಯರ್ಥಿಯು ತಪ್ಪು ಮಾಹಿತಿ ನೀಡಿ ಅರ್ಜಿಸಲ್ಲಿಸಿದ್ದಲ್ಲಿ ಅಂತಹವರ ವಿರುದ್ಧ ಪ್ರಾಧಿಕಾರವು ಕಾನೂನಿನನ್ವಯ ಸೂಕ್ತ ಕ್ರಮ ಕೈಗೊಳ್ಳಲು ಅಧಿಕಾರ ಹೊಂದಿರುತ್ತದೆ ಮತ್ತು ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

13. ಅಭ್ಯರ್ಥಿಯ ಭಾವಚಿತ್ರ ಹಾಗೂ ಸಹಿಯನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಲು ಈ ಕೆಳಕಂಡ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

ಅ) ಇತ್ತೀಚಿನ ಬಣ್ಣದ ಭಾವಚಿತ್ರವು 5 ಸೆ.ಮೀ ಉದ್ದ, 3.6 ಸೆ.ಮೀ ಅಗಲ ಅಳತೆಯುಳ್ಳದ್ದಾಗಿರಬೇಕು ಮತ್ತು ಭಾವಚಿತ್ರವನ್ನು ಜೆಪಿಜಿ (jpg) ಮಾದರಿಯಲ್ಲಿ 50 ಕೆ.ಬಿ ಗಾತ್ರವನ್ನು ಮೀರದಂತೆ ಸ್ಕ್ಯಾನ್ ಮಾಡಿ ಅರ್ಜಿಯೊಂದಿಗೆ ಅಪ್‌ಲೋಡ್ ಮಾಡಬೇಕು. ಯಾವುದೇ ಕಾರಣಕ್ಕೂ ಭಾವಚಿತ್ರದ ಮೇಲೆ ಸಹಿ ಮಾಡಬಾರದು.

ಆ) ಅಭ್ಯರ್ಥಿಯು ಕಪ್ಪು ಶಾಹಿಯ ಬಾಲ್‌ಪಾಯಿಂಟ್ ಪೆನ್ನಿನಲ್ಲಿ 2.5 ಸೆ.ಮೀ. ಉದ್ದ 7.5 ಸೆ.ಮೀ. ಅಗಲ ಮೀರದಂತೆ ಬಿಳಿ ಹಾಳೆಯ ಮೇಲೆ ಸಹಿ ಮಾಡಿ ಜೆಪಿಜಿ (jpg) ಮಾದರಿಯಲ್ಲಿ 50 ಕೆ.ಬಿ ಗಾತ್ರವನ್ನು ಮೀರದಂತೆ ಸ್ಕ್ಯಾನ್ ಮಾಡಿ ಅರ್ಜಿಯೊಂದಿಗೆ ಅಪ್‌ಲೋಡ್ ಮಾಡಬೇಕು.

14. ಅಭ್ಯರ್ಥಿಯು ಆನ್‌ಲೈನ್ ಅರ್ಜಿಯಲ್ಲಿ ಕೇಳಲಾದ ಎಲ್ಲಾ ಮಾಹಿತಿಗಳನ್ನು ಭರ್ತಿ ಮಾಡಿ ನಿಗದಿತ ಶುಲ್ಕ ಪಾವತಿಸಲು ಅರ್ಜಿಯಲ್ಲಿ ತಿಳಿಸಿರುವಂತೆ ಕ್ರಮ ಕೈಗೊಳ್ಳುವುದು ಹಾಗೂ ಅರ್ಜಿ ಶುಲ್ಕವನ್ನು ತುಂಬಿದ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೂ ತಮ್ಮ ಹತ್ತಿರ ಕಾಯ್ದಿರಿಸಿಕೊಳ್ಳತಕ್ಕದ್ದು

downloaded from: www.kpscvaani.com

ಹಾಗೂ ಅರ್ಹತಾ ಪರೀಕ್ಷೆಯ / ಸಂದರ್ಶನದ / ದಾಖಲಾತಿ ಪರಿಶೀಲನೆ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

**15.** ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ವಿಳಂಬ ಮಾಡದೆ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂಧರ್ಭದಲ್ಲಿ / ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಹಾಗೂ ಬೇರೆ ಯಾವುದೇ ನೇಮಕಾತಿಗಾಗಲೀ ಅಥವಾ ನಕಲಿ ಅರ್ಜಿಗಳಿಗಾಗಲೀ ಇತರೆ ಹುದ್ದೆಗಳಿಗೆ ಹೊಂದಾಣಿಕೆ ಮಾಡಿಕೊಳಳಲಾಗುವುದಿಲ್ಲ ಹಾಗೂ ಅಭ್ಯರ್ಥಿಗಳು ಪ್ರತಿಯೊಂದು ಹುದ್ದೆಗೂ ಪ್ರತ್ಯೇಕ ಅರ್ಜಿ ಮತ್ತು ಶುಲ್ಕವನ್ನು ಸಲ್ಲಿಸಬೇಕಾಗಿರುತ್ತದೆ.

**16.** ಶುಲ್ಕ ಸಂದಾಯ ಮಾಡಿರುವ ಬಗ್ಗೆ ಅಭ್ಯರ್ಥಿಗಳು ಎಸ್‌ಬಿಐ ಶಾಖೆಗಳಲ್ಲಿ ವಿಚಾರಿಸತಕ್ಕದ್ದು.

**17.** ಶುಲ್ಕವನ್ನು ಚಲನ್ ಮುಖಾಂತರ ಪಾವತಿಸಲು ದಿನಾಂಕ:**01-04-2019** ಕಡೆಯ ದಿನಾಂಕವಾಗಿದ್ದು ಅದನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ವ್ಯವಹಾರದ ವೇಳೆಯಲ್ಲಿ ಪಾವತಿಸತಕ್ಕದ್ದು.

**18.** ಅರ್ಹ ಅಭ್ಯರ್ಥಿಗಳಿಗೆ ಎಸ್‌ಎಂಎಸ್ ಹಾಗೂ ಇ-ಮೇಲ್ ಮುಖಾಂತರ ಮಾಹಿತಿ ನೀಡಲಾಗುವುದು. ಒಂದು ವೇಳೆ ಅಭ್ಯರ್ಥಿಗಳಿಗೆ ಎಸ್‌ಎಂಎಸ್ ಹಾಗೂ ಇ-ಮೇಲ್ ಮುಖಾಂತರ ಸಂದೇಶ ತಲುಪದಿದ್ದಲ್ಲಿ ಈ ಪ್ರಾಧಿಕಾರ ಹೊಣೆಯಾಗಿರುವುದಿಲ್ಲ. ಅರ್ಹ ಅಭ್ಯರ್ಥಿಗಳು **https://districts.ecourts.gov.in/bangalore** ಅಥವಾ **www.karnatkajudiciary.kar.nic.in/districtrecruitment.asp** ವೆಬ್‌ಸೈಟ್‌ನಿಂದ ಅರ್ಹತಾ ಪರೀಕ್ಷೆಯ ಪ್ರವೇಶ ಪತ್ರವನ್ನು ಮತ್ತು ಸಂದರ್ಶನದ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳುವುದು. ಈ ಕಛೇರಿಯು ಯಾವುದೇ ಕಾರಣಕ್ಕೂ ಪ್ರವೇಶ ಪತ್ರಗಳನ್ನು ಪ್ರತ್ಯೇಕವಾಗಿ ರವಾನಿಸಲಾಗುವುದಿಲ್ಲ. ಅಭ್ಯರ್ಥಿಗಳು ಕಡ್ಡಾಯವಾಗಿ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಂಡು ಒಂದು ಮೂಲ ಗುರುತಿನ ಚೀಟಿಯೊಂದಿಗೆ (ಓಟರ್ ಐಡಿ/ ಆಧಾರ್ ಕಾರ್ಡ್/ ಡ್ರೈವಿಂಗ್ ಲೈಸೆನ್ಸ್ /ಪ್ಯಾನ್‌ಕಾರ್ಡ್ ಪಾಸ್‌ಪೋರ್ಟ್) ಅರ್ಹತಾ ಪರೀಕ್ಷೆಗೆ ಮತ್ತು ಸಂದರ್ಶನಕ್ಕೆ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ಪರೀಕ್ಷಾ ಕೇಂದ್ರವನ್ನು ಪ್ರವೇಶಿಸಲು ಅನುಮತಿಸಲಾಗುವುದಿಲ್ಲ.

**19.** ಅರ್ಹತಾ ಪರೀಕ್ಷೆಯ ವೇಳಾಪಟ್ಟಿ, ಸಂದರ್ಶನ ವೇಳಾ ಪಟ್ಟಿ ಹಾಗೂ ಅಭ್ಯರ್ಥಿಗಳ ಪಟ್ಟಿಯನ್ನು ಈ ನ್ಯಾಯಾಲಯದ ವೆಬ್‌ಸೈಟ್ **https://districts.ecourts.gov.in/bangalore** ಅಥವಾ **www.karnatkajudiciary.kar.nic.in/districtrecruitment.asp** ನಲ್ಲಿ ಪ್ರಕಟಿಸಲಾಗುವುದು. ಅರ್ಹತಾ ಪರೀಕ್ಷೆಗೆ / ಸಂದರ್ಶನಕ್ಕೆ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಅಭ್ಯರ್ಥಿಗಳು ಮೇಲ್ಕಂಡ ವೆಬ್‌ಸೈಟ್‌ನಿಂದ ಮಾಹಿತಿ ಪಡೆದುಕೊಳ್ಳತಕ್ಕದ್ದು.

ಅಭ್ಯರ್ಥಿಗಳು ಅರ್ಹತಾ ಪರೀಕ್ಷೆ / ಸಂದರ್ಶನ / ಪರಿಶೀಲನೆಯ ಸಮಯದಲ್ಲಿ ಈ ಕೆಳಕಂಡ ಮೂಲ ದಾಖಲೆಗಳನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

downloaded from: www.kpscvaani.com

- ಆನ್‌ಲೈನ್ ಮೂಲಕ ಸಲ್ಲಿಸಲಾದ ಅರ್ಜಿಯ ಪ್ರತಿ.

- ಹುದ್ದೆಗೆ ನಿಗದಿಪಡಿಸಿದ ಶುಲ್ಕವನ್ನು ಪಾವತಿಸಿದ ರಶೀದಿ ಪ್ರತಿ.

- ಹುಟ್ಟಿದ ದಿನಾಂಕದ ಆಧಾರವಾಗಿ ಎಸ್.ಎಸ್.ಎಲ್.ಸಿ ಅಂಕಪಟ್ಟಿ , ಜನನ ಪ್ರಮಾಣ ಪತ್ರ ಅಥವಾ ಶಾಲಾ ವರ್ಗಾವಣೆ ಪತ್ರ ಇತ್ಯಾದಿ.

- ವಿದ್ಯಾರ್ಹತೆ ಆಧಾರವಾಗಿ ಸಂಬಂಧಿತ ಮೂಲ ಅಂಕಪಟ್ಟಿಗಳು.

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ನಿಗದಿತ ನಮೂನೆ 'ಡಿ'ಯಲ್ಲಿ ಪಡೆದ ಚಾಲ್ತಿಯಿರುವ ಜಾತಿ ಪ್ರಮಾಣ ಪತ್ರ.

- ಪ್ರವರ್ಗ-I ಕ್ಕೆ ಸೇರಿದ ಅಭ್ಯರ್ಥಿಗಳು ನಿಗದಿತ ನಮೂನೆ 'ಇ'ಯಲ್ಲಿ ಪಡೆದ ಚಾಲ್ತಿಯಿರುವ ಜಾತಿ ಪ್ರಮಾಣ ಪತ್ರ.

- ಪ್ರವರ್ಗ- II-(ಎ), II-(ಬಿ), III-(ಎ), III-(ಬಿ) ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಸರ್ಕಾರಿ ಅಧಿಸೂಚನೆ ಸಂಖ್ಯೆ ಎಸ್.ಡಬ್ಲ್ಯೂಡಿ.126 ಬಿಸಿಎ 2002 ದಿ.13-2-2003 ರಲ್ಲಿ ನಿಗದಿಪಡಿಸಿರುವ ನಮೂನೆ 'ಎಫ್' ಪ್ರಕಾರ ಸಂಬಂಧಿತ ತಹಸೀಲ್ದಾರ್‌ರವರಿಂದ ಪಡೆದ ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ದೃಢೀಕರಣ ಪತ್ರ.

- ಗ್ರಾಮೀಣ ಮೀಸಲಾತಿ ಕೋರುವ ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 06 ಸೆನೆನಿ 2001 ದಿ.13-2-2001 ರಲ್ಲಿ ನಿಗದಿಪಡಿಸಿರುವ ನಮೂನೆ 1 ಮತ್ತು 2 ನ್ನು 1 ರಿಂದ 10 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ ಸಂಬಂಧಿತ ಶಾಲಾ ಮುಖ್ಯೋಪಾಧ್ಯಾಯರಿಂದ ಪಡೆದು ಕ್ಷೇತ್ರ ಶಿಕ್ಷಣಾಧಿಕಾರಿಗಳವರಿಂದ ಮೇಲುರುಜು ಮಾಡಿಸಿದ ಪ್ರಮಾಣ ಪತ್ರ.

- ಕನ್ನಡ ಮಾಧ್ಯಮ ಮೀಸಲಾತಿ ಕೋರುವ ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 97 ಸೆನೆನಿ 2002 ದಿ.22.11.2002 ರಲ್ಲಿ ನಿಗದಿಪಡಿಸಿರುವ ನಮೂನೆ 1 ರಿಂದ 10 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ ಸಂಬಂಧಿತ ಶಾಲಾ ಮುಖ್ಯೋಪಾಧ್ಯಾಯರಿಂದ ಪಡೆದು ಕ್ಷೇತ್ರ ಶಿಕ್ಷಣಾಧಿಕಾರಿಗಳವರಿಂದ ಮೇಲುರುಜು ಮಾಡಿಸಿದ ಪ್ರಮಾಣ ಪತ್ರ.

- ಮಾಜಿ ಸೈನಿಕ ಅಭ್ಯರ್ಥಿಗಳು ಸೇನೆಯಿಂದ ವಿಮುಕ್ತಿಗೊಂಡ ಬಗ್ಗೆ ಸಂಬಂಧಿತ ಅಧಿಕಾರಿಗಳು ನೀಡಿರುವ ಪ್ರಮಾಣ ಪತ್ರ ಹಾಗು ಗುರುತಿನ ಚೀಟಿ ಕಡ್ಡಾಯವಾಗಿ ಹಾಜರುಪಡಿಸುವುದು.

- ಅಂಗವಿಕಲ ಮೀಸಲಾತಿಯಡಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆದ ವೈದ್ಯಕೀಯ ಪ್ರಮಾಣಪತ್ರ.

- ಯೋಜನಾ ನಿರಾಶ್ರಿತ ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 44 ಸೆನೆನಿ 2001 ದಿ.27.07.2001 ರ ಪ್ರಕಾರ ಪಡೆದ ನಿಗದಿತ ಪ್ರಮಾಣ ಪತ್ರ.

- ಹೈದರಾಬಾದ್ ಕರ್ನಾಟಕ ಸ್ಥಳೀಯ ವೃಂದಕ್ಕೆ ಮೀಸಲಾತಿ ಕೋರುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ.

downloaded from: www.kpscvaani.com

❖ ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿದ ದಿನಾಂಕದಿಂದ ಇತ್ತೀಚಿನ 6 ತಿಂಗಳೊಳಗೆ ಪಡೆದ ಇಬ್ಬರು ಗೌರವಾನ್ವಿತ ವ್ಯಕ್ತಿಗಳು ನೀಡಿರುವ ನಡತೆ ಪ್ರಮಾಣಪತ್ರ ಹಾಗೂ ಶಾಲಾ ನಡತೆ ಪ್ರಮಾಣಪತ್ರಗಳು.

❖ ಮೇಲ್ಕಂಡ ದಾಖಲೆಗಳು ನಿಗದಿತ ನಮೂನೆಗಳಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕಕ್ಕೆ ಮೊದಲು ಪಡೆದ ದಾಖಲೆಗಳಾಗಿರಬೇಕು ಹಾಗೂ ಸದರಿ ದಾಖಲೆಗಳ ಮೂಲ ದಾಖಲೆಗಳನ್ನು ಪರಿಶೀಲನೆ ಸಮಯದಲ್ಲಿ ಹಾಜರುಪಡಿಸಬೇಕು. ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ನಂತರ ಪಡೆದ ದಾಖಲೆಗಳನ್ನು ಪರಿಗಣಿಸಲಾಗುವುದಿಲ್ಲ.

❖ ಅರ್ಹತಾ ಪರೀಕ್ಷೆಗೆ / ಸಂದರ್ಶನಕ್ಕೆ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿಯೇ ಹಾಜರಾಗಬೇಕು.

❖ ಈ ನೇಮಕಾತಿ ಸಂಬಂಧವಾಗಿ ಅಭ್ಯರ್ಥಿಗಳು ಈ ಕಛೇರಿಯೊಂದಿಗೆ ಯಾವುದೇ ಪತ್ರ ವ್ಯವಹಾರ ನಡೆಸಲು ಆಸ್ಪದ ಇರುವುದಿಲ್ಲ.

❖ ಅಭ್ಯರ್ಥಿಗಳು ನಕಲಿ ಅಭ್ಯರ್ಥಿಯಾಗಿರುವುದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವುದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವುದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆ ಮಾಚಿರುವುದು ಅಥವಾ ನೇಮಕಾತಿ ಉದ್ದೇಶಗಳಿಗೆ ನಡೆಸಲಾದ ಪರಿಶೀಲನೆ ಪ್ರಕ್ರಿಯೆಗಳ ಸಂದರ್ಭಗಳಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವುದು ಅಥವಾ ಅನುಸರಿಸಲು ಪ್ರಯತ್ನಿಸಿರುವುದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವುದು ಕಂಡು ಬಂದಲ್ಲಿ ಅವರ ಅಭ್ಯರ್ಥಿತನವನ್ನು ರದ್ದುಪಡಿಸಲಾಗುವುದು ಹಾಗೂ ಅಭ್ಯರ್ಥಿಯನ್ನು ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡಿಸಲಾಗುವುದು.

10-1-2019

ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ನಗರ ಸಿವಿಲ್ ನ್ಯಾಯಾಲಯ,
ಬೆಂಗಳೂರು.

downloaded from: www.kpscvaani.com